2019 ಕ.ತೀ.ವ 1383

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

## ರಮೇಶ್ –ವಿರುದ್ಧ– ಜೆ. ಶಾಲಿನಿ*

ಒ.ಎಸ್.ಸಂಖ್ಯೆ: 154/2010ರಲ್ಲಿನ ನಿರ್ದಿಷ್ಟ ಪಾಲನೆಯ ಡಿಕ್ರಿಯಿಂದ ಬಾಧಿತನಾದ ಪ್ರತಿವಾದಿಯು, ಚನ್ನಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರ ಕಡತದಲ್ಲಿನ ಆರ್.ಎ.ಸಂಖ್ಯೆ: 42/2013ರಲ್ಲಿನ ಸದರಿ ದಾವೆಯಲ್ಲಿ ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿದ್ದಾನೆ. ಸದರಿ ಅಪೀಲಿನಲ್ಲಿ, ಆತನು ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದೊಂದಿಗೆ ಓದಲಾದ XXVIನೇ ಕ್ರಮಾದೇಶದ 10ಎ ನೇ ನಿಯಮದ ಅಡಿಯಲ್ಲಿ ಐ.ಎ.2 ರಲ್ಲಿ ಅರ್ಜಿಯನ್ನು ದಾಖಲಿಸಿದ್ದು, ಅದರಲ್ಲಿ ಆತನು, ನಿಶಾನೆ ಪಿ.1ರಲ್ಲಿರುವ ಸಹಿ ಮತ್ತು ಹೆಬ್ಬೆರಳ ಗುರುತು, ಸದರಿ ಅಪೀಲಿನ ಅಪೀಲುದಾರನ ಸಹಿ ಮತ್ತು ಹೆಬ್ಬೆರಳ ಗುರುತುಗಳಲ್ಲವೆಂದು; ಆದುದರಿಂದಾಗಿ ಅವುಗಳನ್ನು ವೈಜ್ಞಾನಿಕ ಪರಿಶೀಲನೆಗಾಗಿ ಕಳುಹಿಸಿಕೊಡಬೇಕಾಗುತ್ತದೆಂದು ಹೇಳಿದ್ದಾನೆ. ದಿನಾಂಕ: 10.03.2014ರಂದು ಆತನು ಸಲ್ಲಿಸಿದ ಸದರಿ ಅರ್ಜಿಯನ್ನು ಅಧೀನ ನ್ಯಾಯಾಲಯದಲ್ಲಿ ವಾದಿಯಾಗಿರುವ, ಸದರಿ ದಾವೆಯ ಪ್ರತಿವಾದಿಯು ವಿರೋಧಿಸಿದ್ದಾನೆ. ಅಧೀನ ಅಪೀಲು ನ್ಯಾಯಾಲಯವು, ಅರ್ಜಿಯನ್ನು ಹಾಗೂ ಅದರಲ್ಲಿ ಎತ್ತಲಾದ ಆಕ್ಷೇಪಣೆಗಳ ಗುಣಾರ್ಹತೆಗಳನ್ನು ವಿವೇಚಿಸಿದ ನಂತರ, ದಿನಾಂಕ: 9.7.2014ರ ಅದರ ಆದೇಶದ ಮೂಲಕ ಸದರಿ ಅರ್ಜಿಯನ್ನು ತಿರಸ್ಕರಿಸಿದ್ದು ಅದನ್ನು ಈ ರಿಟ್ ಅರ್ಜಿಯಲ್ಲಿ ಪ್ರಶ್ನಿಸಬೇಕೆಂದು ಕೋರಲಾಗಿದೆ. ಇಲ್ಲಿನ ವಾದಿಯು ಒಮ್ಮೆ ತನ್ನ ಲಿಖಿತ ಹೇಳಿಕೆಯಲ್ಲಿ ತಾನು ಮಾರಾಟ ಪತ್ರ ಬರೆದುಕೊಡಲು ಸಿದ್ಧನಿದ್ದು, ಇಲ್ಲಿನ ಪ್ರತಿವಾದಿಯು, ತನ್ನ ವ್ಯವಹಾರವನ್ನು ಪೂರ್ಣಗೊಳಿಸಲು ಮುಂದೆ ಬಂದಿರುವುದಿಲ್ಲವೆಂದು ಹೇಳಿದ್ದು ದಾಖಲೆಯಲ್ಲಿದ್ದರೂ, ಮತ್ತೊಂದೆಡೆ ತಾನು ಈ ಒಪ್ಪಂದ ಪತ್ರವನ್ನು ಬರೆದೇ ಕೊಟ್ಟಿಲ್ಲವೆಂದೂ, ತನ್ನ ಸಹಿ ಅವರೇ ಮಾಡಿರುವ ನಕಲಿಯದೆಂದೂ, ಅದನ್ನು ವೈಜ್ಞಾನಿಕ

*ರಿಟ್ ಅರ್ಜಿ ಸಂಖ್ಯೆ: 38396/2014 (ಜಿಎಂ–ಸಿಪಿಸಿ), ದಿನಾಂಕ 14ನೇ ಫೆಬ್ರವರಿ, 2019.

**ತನಿಖೆಗೆ ಒಳಪಡಿಸಬೇಕೆಂದೂ ವಿರೋಧಾಭಾಸದ ಹೇಳಿಕೆಗಳನ್ನು ನೀಡಿದ್ದಾನೆ. ಹಾಗಾಗಿ ಇದನ್ನು ಮತ್ತೊಮ್ಮೆ ಪರಿಶೀಲನೆಗೆ ಒಳಪಡಿಸಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಅರ್ಜಿಯನ್ನು ವಜಾಗೊಳಿಸಿದೆ.**

ಅರ್ಜಿದಾರರ ಪರ: ಶ್ರೀ ಎಸ್. ರಾಜು, ವಕೀಲರು.

ಪ್ರತ್ಯರ್ಜಿದಾರರ ಪರ: ಶ್ರೀ ಕೆ.ಎಂ. ರವಿಕುಮಾರ್, ವಕೀಲರು ಮತ್ತು ಶ್ರೀ ಪರಮಶಿವಯ್ಯ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಸತ್ಯನಾರಾಯಣ:**

ಒ.ಎಸ್.ಸಂಖ್ಯೆ: 154/2010ರಲ್ಲಿನ ನಿರ್ದಿಷ್ಟ ಪಾಲನೆಯ ಡಿಕ್ರಿಯಿಂದ ಬಾಧಿತನಾದ ಪ್ರತಿವಾದಿಯು, ಚನ್ನಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರ ಕಡತದಲ್ಲಿನ ಆರ್.ಎ.ಸಂಖ್ಯೆ: 42/2013ರಲ್ಲಿನ ಸದರಿ ದಾವೆಯಲ್ಲಿ ಹೊರಡಿಸಿದ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿದ್ದಾನೆ. ಸದರಿ ಅಪೀಲಿನಲ್ಲಿ, ಆತನು ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದೊಂದಿಗೆ ಓದಲಾದ XXVIನೇ ಕ್ರಮಾದೇಶದ 10ಎ ನೇ ನಿಯಮದ ಅಡಿಯಲ್ಲಿ ಐ.ಎ.2 ರಲ್ಲಿ ಅರ್ಜಿಯನ್ನು ದಾಖಲಿಸಿದ್ದು, ಅದರಲ್ಲಿ ಆತನು, ನಿಶಾನೆ ಪಿ.1ರಲ್ಲಿರುವ ಸಹಿ ಮತ್ತು ಹೆಬ್ಬೆರಳ ಗುರುತು, ಸದರಿ ಅಪೀಲಿನ ಅಪೀಲುದಾರನ ಸಹಿ ಮತ್ತು ಹೆಬ್ಬೆರಳ ಗುರುತುಗಳಲ್ಲವೆಂದು; ಆದುದರಿಂದಾಗಿ ಅವುಗಳನ್ನು ವೈಜ್ಞಾನಿಕ ಪರಿಶೀಲನೆಗಾಗಿ ಕಳುಹಿಸಿಕೊಡಬೇಕಾಗುತ್ತದೆಂದು ಹೇಳಿದ್ದಾನೆ. ದಿನಾಂಕ: 10.03.2014ರಂದು ಆತನು ಸಲ್ಲಿಸಿದ ಸದರಿ ಅರ್ಜಿಯನ್ನು ಅಧೀನ ನ್ಯಾಯಾಲಯದಲ್ಲಿ ವಾದಿಯಾಗಿರುವ, ಸದರಿ ದಾವೆಯ ಪ್ರತಿವಾದಿಯು ವಿರೋಧಿಸಿದ್ದಾನೆ. ಅಧೀನ ಅಪೀಲು ನ್ಯಾಯಾಲಯವು, ಅರ್ಜಿಯನ್ನು ಹಾಗೂ ಅದರಲ್ಲಿ ಎತ್ತಲಾದ ಆಕ್ಷೇಪಣೆಗಳ ಗುಣಾರ್ಹತೆಗಳನ್ನು ವಿವೇಚಿಸಿದ ನಂತರ, ದಿನಾಂಕ: 9.7.2014ರ ಅದರ ಆದೇಶದ

ಮೂಲಕ ಸದರಿ ಅರ್ಜಿಯನ್ನು ತಿರಸ್ಕರಿಸಿದ್ದು ಅದನ್ನು ಈ ರಿಟ್ ಅರ್ಜಿಯಲ್ಲಿ ಪ್ರಶ್ನಿಸಬೇಕೆಂದು ಕೋರಲಾಗಿದೆ. ಇದರಲ್ಲಿನ ಪಕ್ಷಕಾರರನ್ನು ಅಧೀನ ನ್ಯಾಯಾಲಯದಲ್ಲಿನ ಅವರ ಶ್ರೇಣಿ ಮೂಲಕ ಉಲ್ಲೇಖಿಸಲಾಗಿದೆ.

2. ಅರ್ಜಿದಾರ / ಪ್ರತಿವಾದಿಯ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಲಾಗಿದೆ. ಐ.ಎ.2ರಲ್ಲಿನ ಪ್ರಶ್ನಿತ ಆದೇಶವನ್ನು ಹಾಗೂ ಅರ್ಜಿಯನ್ನು ಪರಿಶೀಲಿಸಲಾಗಿದೆ ಮತ್ತು ಅವುಗಳ ಮೇಲಿನ ಆಕ್ಷೇಪಣೆಗಳನ್ನು ಪ್ರತಿವಾದಿಯು ಅನುಸೂಚಿತ ದಾವಾ ಸ್ವತ್ತನ್ನು ದಿನಾಂಕ: 28.5.2007ರ ಮಾರಾಟ ಒಪ್ಪಂದ ಮೇರೆಗೆ ವಾದಿಗೆ ಮಾರಾಟ ಮಾಡಲು ಒಪ್ಪಿಕೊಂಡಿರುವನು ಎಂಬುದು ಸ್ಪಷ್ಟವಾಗಿ ಅದರಲ್ಲಿ ಕಂಡು ಬರುತ್ತದೆ. ಪ್ರತಿವಾದಿ ಮತ್ತು ವಾದಿಯು ಮಾರಾಟ ಒಪ್ಪಂದದಲ್ಲಿ ಅವರ ಸಹಿಗಳನ್ನು ಹಾಕಿರುವುದಷ್ಟೇ ಅಲ್ಲದೇ, ಹೆಬ್ಬೆರಳು ಗುರುತುಗಳನ್ನು ಸಹ ಹಾಕಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಪ್ರತಿವಾದಿಯ 1,80,000/– ರೂ.ಗಳ ಮಾರಾಟ ಕ್ರಯಕ್ಕೆ ಪ್ರತಿಯಾಗಿ ಸದರಿ ಮಾರಾಟ ಒಪ್ಪಂದದಡಿಯಲ್ಲಿ 1,30,000/– ರೂ.ಗಳನ್ನು ಪಡೆದಿರುವನೆಂಬುದು ಕಂಡುಬಂದಿದೆ. ಒಪ್ಪಿಕೊಂಡಂತೆ, ನಿರ್ದಿಷ್ಟ ಪಾಲನೆಗೆ ಸಂಬಂಧಿಸಿದ ದಾವೆಯಲ್ಲಿ, ಪ್ರತಿವಾದಿಯು ಅಸಂಗತ ನಿಲುವನ್ನು ತೆಗೆದುಕೊಂಡಿದ್ದು, ಒಂದೆಡೆ ಕಂಡಿಕೆ ಸಂಖ್ಯೆ: 2ರಲ್ಲಿನ ಸ್ವತ್ತಿನ ಮಾರಾಟದ ಸಂಬಂಧದಲ್ಲಿ ತಾನು ಯಾವುದೇ ಒಪ್ಪಂದವನ್ನು ಮಾಡಿಕೊಂಡಿಲ್ಲವೆಂದು ಹೇಳಿದರೆ, ಇನ್ನೊಂದೆಡೆ ಕಂಡಿಕೆ ಸಂಖ್ಯೆ: 4ರ ವಿಷಯಕ್ಕೆ ಬಂದಾಗ, ಸದರಿ ಒಪ್ಪಂದದ ಅವಧಿ ಮೀರಿದೆ ಎಂದು ಮತ್ತು ಪ್ರತಿವಾದಿಯು ಮಾರಾಟ ಪತ್ರವನ್ನು ಬರೆದುಕೊಡಲು ಸಿದ್ಧನಿದ್ದು, ಅದಕ್ಕೆ ಇಚ್ಛಿಸಿದಾಗ್ಯೂ, ವಾದಿಯೇ ಬಾಕಿ ಮಾರಾಟ ಪ್ರತಿಫಲ ಮೊತ್ತವನ್ನು ಪಾವತಿಸದೆ ಬರೆದುಕೊಟ್ಟ ಮಾರಾಟಪತ್ರವನ್ನು ಪಡೆದುಕೊಂಡಿರುವುದಿಲ್ಲವೆಂದು ಹೇಳಿಕೆ ನೀಡಲಾಗಿದೆ. ಸದರಿ ಹೇಳಿಕೆಯು ಮಾರಾಟ ಒಪ್ಪಂದವನ್ನು ಬರೆದುಕೊಟ್ಟಿರುವುದರ ಒಪ್ಪಿಗೆಗೆ ಸಮನಾಗಿದೆ. ಇಬ್ಬರು ಪಕ್ಷಕಾರರ ಪರ ಅಂಥ ವಾದ ಹಾಗೂ ಸಾಕ್ಷ್ಯದ ಆಧಾರದ ಮೇಲೆ ದಿನಾಂಕ: 3.6.2013ರ ತೀರ್ಪಿನ ಮೂಲಕ ದಾವೆಯನ್ನು ಡಿಕ್ರಿಗೊಳಿಸಲಾಯಿತು.

3. ಅಧಿವಿಚಾರಣಾ ನ್ಯಾಯಾಲಯದ ಸದರಿ ತೀರ್ಪು ಹಾಗೂ ಡಿಕ್ರಿಯ ವಿರುದ್ಧ ಚನ್ನಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರ (ಹಿರಿಯ ವಿಭಾಗ) ಕಡತದಲ್ಲಿ ಆರ್.ಎ.ಸಂಖ್ಯೆ: 42/2013ರಲ್ಲಿ ಪ್ರತಿವಾದಿಯು ಅಪೀಲನ್ನು ಹೂಡಿದ್ದಾನೆ. ಅದರಲ್ಲಿ ಆತನು, ಐ.ಎ.2ನಲ್ಲಿ ಪ್ರಸ್ತುತ ಅರ್ಜಿಯನ್ನು ದಾಖಲಿಸಿರುವನು. ಅದರ ಸಮರ್ಥನೆಯಲ್ಲಿ ಸಲ್ಲಿಸಿದ ಅಫಿಡಾವಿಟ್‌ನಲ್ಲಿ ಆತನು, ವಾದಿಯ ಹೆಸರಿನಲ್ಲಿ ಯಾವುದೇ ಒಪ್ಪಂದವನ್ನು ಬರೆದುಕೊಟ್ಟಿರುವುದನ್ನು ತನ್ನ ಲಿಖಿತ ಹೇಳಿಕೆಯಲ್ಲಿ ತಾನು ಅಲ್ಲಗಳೆದಿದ್ದಾಗ್ಯೂ ವಾದಿಯು ತನ್ನ ಸುಳ್ಳು ಸಹಿ ಮತ್ತು ಹೆಬ್ಬೆರಳು ಗುರುತನ್ನು ಸೃಷ್ಟಿಸುವ ಮೂಲಕ ದಸ್ತಾವೇಜನ್ನು ಸೃಜಿಸಿದ್ದು, ಕಣ್ ತಪ್ಪಿನಿಂದ ಅವುಗಳನ್ನು ವೈಜ್ಞಾನಿಕ ಪರಿಶೀಲನೆಗೆ ಉಲ್ಲೇಖಿಸುವ ಸಂಬಂಧದಲ್ಲಿ ತನಗೆ ಅರ್ಜಿಯನ್ನು ಸಲ್ಲಿಸಲು ಸಾಧ್ಯವಾಗಲಿಲ್ಲ ಎಂದು ಹೇಳಿದ್ದಾನೆ. ಆದಾಗ್ಯೂ, ಲಿಖಿತ ಹೇಳಿಕೆಯ ಕಂಡಿಕೆ 4 ರಲ್ಲಿ ಆತನು ಇತರ ವಿರೋಧಾತ್ಮಕ ಹೇಳಿಕೆಯನ್ನು ಮರೆಮಾಚಿದ್ದು, ಅದರಲ್ಲಿ, ಆತನು, ಮಾರಾಟ ಪತ್ರವನ್ನು ಬರೆದುಕೊಡಲು ತಾನು ಸಿದ್ಧನಿದ್ದು, ಇಚ್ಛೆಪಟ್ಟಿದ್ದರೂ, ವಾದಿಯು ವ್ಯವಹಾರವನ್ನು ಪೂರ್ಣಗೊಳಿಸಲು ಮುಂದೆ ಬರಲಿಲ್ಲವೆಂದು ಹೇಳಿದ್ದಾನೆ. ವಾಸ್ತವವಾಗಿ, ಒಮ್ಮೆ ಪ್ರತಿವಾದಿಯು ತನ್ನ ಭಾಗದ ಒಪ್ಪಂದವನ್ನು ಪೂರ್ಣಗೊಳಿಸಲು ಸಿದ್ಧನಿರುವುದಾಗಿ ಮತ್ತು ಇಚ್ಛಿಸುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದಾಗ, ಮಾರಾಟ ಒಪ್ಪಂದ ಬರೆದುಕೊಡುವುದರ ಪರಿಣಾಮಕ್ಕೆ ಒಪ್ಪಿಗೆ ನೀಡಿದಂತಾಗುವುದು. ಹಾಗಾಗಿ ಮಾರಾಟ ಒಪ್ಪಂದವನ್ನು ತಾನು ಬರೆದುಕೊಟ್ಟಿಲ್ಲವೆಂಬ ಪರಿಣಾಮಕ್ಕೆ ಎತ್ತಿದ ವಾದದ ಆಧಾರದ ಮೇಲೆ ಒಪ್ಪಂದದಲ್ಲಿರುವ ಹೆಬ್ಬೆರಳು ಗುರುತು ಹಾಗೂ ಸಹಿಯ ಪರಿಶೀಲನೆಗೆ ಕೋರಲು ಆತನಿಗೆ ಅವಕಾಶವಿರುವುದಿಲ್ಲ.

4. ಇದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಪಕ್ಷಕಾರರು ಅಸಂಗತವಾದ ಸಮರ್ಥನೆಗಳನ್ನು ತೆಗೆದುಕೊಳ್ಳಲು ಹಕ್ಕುಳ್ಳವರೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ, ಇಡೀ ವ್ಯವಹರಣೆಯ ಬಗ್ಗೆ ಆತನು ಮುಗ್ಧ ಹಾಗೂ ಅದು ಆತನ ಅರಿವಿಗೆ ಬಾರದಂತೆ ನಡೆದಿದ್ದರೆ ಮತ್ತು ಅಧೀನ ನ್ಯಾಯಾಲಯದ ಮುಂದಿದ್ದ ವ್ಯವಹರಣೆಗಳನ್ನು ಆತನಿಗೆ ಸಾಕಷ್ಟು ಅವಕಾಶವನ್ನು ನೀಡದೆ ನಿರ್ಧರಿಸಲಾಗಿದ್ದರೆ

ಹೇಗೋ ಹಾಗೆ ಎಂಬಷ್ಟರ ಮಟ್ಟಿಗೆ ಆತನ ಲಿಖಿತ ಹೇಳಿಕೆಯಲ್ಲಿನ ಹೇಳಿಕೆಯ ಮೇಲೆ ಆತನು ಅವಲಂಬಿಸಲು ಪ್ರಯತ್ನಿಸಿರುವಷ್ಟರಮಟ್ಟಿಗೆ ಇದನ್ನು ಲಂಬಿಸಲಾಗದು. ಆದಾಗ್ಯೂ, ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, ಅಧೀನ ನ್ಯಾಯಾಲಯದ ಮುಂದೆ ನಿರ್ದಿಷ್ಟ ಪಾಲನೆಗೆ ಸಂಬಂಧಿಸಿದ ದಾವೆಯು ಇತ್ಯರ್ಥದಲ್ಲಿರುವಾಗ ಆತನು ಮಾಡಿದ ಅಂತಹ ಯಾವುದೇ ಪ್ರಯತ್ನದ ಬಗ್ಗೆ ಯಾವುದೇ ಉಲ್ಲೇಖವಿಲ್ಲ ಎಂಬುದು ಕಂಡು ಬಂದಿದೆ. ವಿಷಯಕ್ಕೆ ಸಂಬಂಧಿಸಿದ ಆ ಅಭಿಪ್ರಾಯದ ಹಿನ್ನೆಲೆಯಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದೊಂದಿಗೆ ಓದಲಾದ XXVIನೇ ಕ್ರಮಾದೇಶದ 10ನೇ ನಿಯಮದ ಮೇರೆಗೆ ಸಲ್ಲಿಸಲಾದ ಐ.ಎ.2 ಇದನ್ನು ತಿರಸ್ಕರಿಸುವಲ್ಲಿ, ಅಧೀನ ಅಪೀಲು ನ್ಯಾಯಾಲಯವು ನೀಡಿರುವ ಕಾರಣವು ನ್ಯಾಯಸಮ್ಮತವಾಗಿದೆ ಹಾಗೂ ಸೂಕ್ತವಾಗಿದೆ ಎಂದು ಕಂಡುಬರುತ್ತದೆ ಎಂಬುದು ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯವಾಗಿದೆ. ಆದ್ದರಿಂದ ಈ ರಿಟ್ ಅರ್ಜಿಯಲ್ಲಿನ ಸದರಿ ಆದೇಶವನ್ನು ಮರುಪರಿಗಣನೆಗೆ ತೆಗೆದುಕೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ತದನುಸಾರವಾಗಿ, ಈ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.